ಸರ್ಕಾರಿ ಗಂಧದ ಸಂಗ್ರಹಾಗಾರವಿದ್ದಿದ್ದರಿಂದ 'ಗಂಧದಕೋಠಿ ಕೆರೆ' ಎಂಬ ಹೆಸರು ಜನಜನಿತವಾಯಿತು. 5,75,000 ರೂಪಾಯಿ ವೆಚ್ಚದಲ್ಲಿ 1882ರಲ್ಲಿ ಕೆರೆ ನಿರ್ಮಾಣ ಮುಗಿಯುವ ಹೊತ್ತಿಗೆ ಸ್ಯಾಂಕಿ ಅವರು ಮೈಸೂರಿನಲ್ಲಿರಲಿಲ್ಲ. ಅವರ ಪ್ರಯತ್ನದ ನೆನಪಿಗಾಗಿ ಕೆರೆಗೆ ಸ್ಯಾಂಕಿ ಎಂಬ ಹೆಸರನ್ನೇ ಇಡಲಾಯಿತು.

ಜನರಿಗೆ ಅಗತ್ಯವಿರುವ ಕೆಲಸಗಳನ್ನು ಮಾಡಿದ ಸ್ಯಾಂಕಿಯಂತಹ ಅಧಿಕಾರಿಗೂ ವೃತ್ತಿ ಬದುಕು ಸುಗಮವಾಗಿರಲಿಲ್ಲ. ಒಳಗೊಳಗೇ ಸಾಕಷ್ಟು ಪ್ರತಿರೋಧ ಎದುರಿಸಬೇಕಾಯಿತು. ಮೈಸೂರು ರಾಜ್ಯವನ್ನು ಭೀಕರ ಬರ ಬಾಧಿಸಿದಾಗ ನೀರು, ಅನ್ನ, ಮೇವಿಗಾಗಿ ಹಾಹಾಕಾರವೆದ್ದಿತ್ತು. ಲಾರ್ಡ್ ಲಿಟ್ಟನ್‌ನಂತಹ ಜನವಿರೋಧಿ ಗವರ್ನರ್ ಜನರಲ್‌ಗಳು ಕ್ಷಾಮ ಪರಿಹಾರಕ್ಕಾಗಿ ಇದೇ ನೆಲದಲ್ಲಿ ಬೆಳೆದ ದವಸ, ಧಾನ್ಯಗಳನ್ನು ಬಳಸಲಿಲ್ಲ. ಪರಿಹಾರ ಕೇಂದ್ರ ತೆರೆದು ಕಾಳುಕಡಿಗಳ ಪುಕ್ಕಟೆ ಹಂಚಿದರೆ ಜನ ದುಡಿಯದೆ ಸೋಮಾರಿಗಳಾಗುವರೆನ್ನುವುದು ಅವರ ನಿಲುವು. 'ದುಡಿಮೆಗೆ ಬರಲಿ, ಕಾಳು ಕೊಡೋಣ' ಎಂದು ಕಾಮಗಾರಿಗಳನ್ನು ಪ್ರಕಟಿಸಿದ. ತುತ್ತು ಕೂಳಿಗಾಗಿ ಹಂಬಲಿಸಿ ಹತ್ತಾರು ಮೈಲಿ ಬಿಸಿಲ ಝಳದಲ್ಲಿ ನಡೆದು ಕಾಮಗಾರಿಯ ಸ್ಥಳಕ್ಕೆ ಬರುವುದರಲ್ಲಿಯೇ ಸಾವಿರಾರು ಜನ ಬಳಲಿ ಸತ್ತರು. ಅವರಲ್ಲಿ ಮಕ್ಕಳು, ವೃದ್ಧರು, ತಾಯಂದಿರು ಹೆಚ್ಚಿದ್ದರು.

ಸ್ಯಾಂಕಿ ಇದನ್ನು ವಿರೋಧಿಸಿದರು. ಬರ ನಿರ್ವಹಣೆ ಅಸಮರ್ಪಕವೆಂದು, ಬರದ ಸಾವುಗಳನ್ನು ತಡೆಯಬಹುದಿತ್ತೆಂದು ದನಿಯೆತ್ತಿದರು. ಈ ಭಿನ್ನಮತವೇ ಮೂಲವಾಗಿ ಸ್ಯಾಂಕಿ ಅವರು ಮೈಸೂರಿನಿಂದ 'ನೀರು ನೆರಳಿಲ್ಲದ' ಅಫ್ಘಾನಿಸ್ತಾನದ ಒಂದು ಪ್ರದೇಶಕ್ಕೆ ವರ್ಗಾವಣೆಯಾದರು. ನಂತರ ಶಿಮ್ಲಾ, ಬಳಿಕ ಮದರಾಸಿಗೆ ಹೋಗಬೇಕಾಯಿತು. ಅಲ್ಲಿ ಮರೀನಾ ಬೀಚಿನ ನಿರ್ಮಾಣ, ಬೊಟಾನಿಕಲ್ ಉದ್ಯಾನವನದ ನಿರ್ಮಾಣದಲ್ಲಿ ತೊಡಗಿದರು. ವೃತ್ತಿ ಬದುಕಿನ ಕೊನೆಕೊನೆಗೆ ಆಸ್ಟ್ರೇಲಿಯಾದ ಅಡಿಲೇಡ್ ಮುಂತಾದ ಸ್ಥಳಗಳಿಗೆ ಜಲತಜ್ಞರಾಗಿ ಹೋಗಿಬಂದರು. ಯರ್ರ ನದಿಯ ಪ್ರವಾಹ ನಿರ್ವಹಣೆ, 50 ಜಲಾಶಯಗಳ ನಿರ್ವಹಿಸುವ ಕೋಲಿಬನ್ ಕಾರ್ಪೊರೇಷನ್ ಅನ್ನು ರೂಪುಗೊಳಿಸಲು ತಜ್ಞ ಸಲಹೆ ನೀಡಿದರು.

ನಿವೃತ್ತರಾದ ಸ್ಯಾಂಕಿ ಸ್ವದೇಶಕ್ಕೆ ಮರಳಿದರು. ಸಮಾಜದ ಕೆಲಸ ಕಾರ್ಯಗಳಲ್ಲಿ ತೊಡಗಿದರು. ಮರಗಳನ್ನು ಅತೀವವಾಗಿ ಪ್ರೀತಿಸುತ್ತಿದ್ದ ಅವರು ತಮ್ಮ ಒಡೆತನದ ಜಾಗದಲ್ಲಿ ಕೈಯಾರ ಗಿಡಗಳನ್ನು ನೆಟ್ಟು ಒಂದು ವನ ರೂಪಿಸಿದರು. ಮರಣಾನಂತರ ಅಲ್ಲಿಯೇ ಅವರ ಸಮಾಧಿ ಮಾಡಿದರು. ಈಗಲೂ ಆ ಹೆಮ್ಮರಗಳಿರುವ ವೃತ್ತಾಕಾರದ ಜಾಗವನ್ನು 'ಸ್ಯಾಂಕಿ ವುಡ್ಸ್' ಎಂದು ಕರೆಯುತ್ತಾರೆ.

## ಕೆರೆ ನುಂಗಿ ಬೆಳೆದ ಊರು

ಬೆಂಗಳೂರಿನಲ್ಲಿ ಸ್ಯಾಂಕಿಯ ಕುರುಹು ಇವತ್ತಿಗೂ ಇದೆ. ಇವತ್ತಿಗೂ ಬೆಂಗಳೂರಿನ ಪುರಾತತ್ವ ವಸ್ತು ಸಂಗ್ರಹಾಲಯ ಅದೇ ಕಟ್ಟಡದಲ್ಲಿದೆ. ಕಟ್ಟಡ ಹಳೆಯದಾಗಿದೆ. 9000ಕ್ಕೂ ಮಿಕ್ಕಿ ವಸ್ತುಗಳು ಅಲ್ಲಿದ್ದರೂ 4000 ವಸ್ತುಗಳಷ್ಟೇ ಪ್ರದರ್ಶನಗೊಂಡು ಮಿಕ್ಕವು ಸ್ಥಳಾಭಾವ ಎದುರಿಸಿವೆ. ಒಂದು ಕೋಟಿಗಿಂತ ಹೆಚ್ಚು ಜನಸಂಖ್ಯೆಯ ಬೆಂಗಳೂರಿನ ವಸ್ತುಸಂಗ್ರಹಾಲಯಕ್ಕೆ ವರ್ಷಕ್ಕೆ 90 ಸಾವಿರ ಸಂದರ್ಶಕರಷ್ಟೇ ಬರುತ್ತಾರೆ. ಸಂದರ್ಶಕರ ಸಂಖ್ಯೆ ಇಳಿಮುಖವಾಗಿರುವುದಕ್ಕೆ ಕಾರಣಗಳೇನೇ ಇರಲಿ, ಸಾರ್ವಜನಿಕರನ್ನು ಸೆಳೆಯುವಂತೆ ವಿಷಯ ನಿರ್ವಹಣೆ, ಆಡಿಯೊ ವಿಷುವಲ್ ಸಹಾಯ, ವ್ಯವಸ್ಥೆ ಅಗತ್ಯವಾಗಿದೆ ಎಂದೇ ಅದರ ನವೀಕರಣ, ವಿಸ್ತರಣೆ, ದುರಸ್ತಿ ಕಾಮಗಾರಿ ನಡೆಯುತ್ತಿದೆ. ಅದರ ಒಂದು ಪಕ್ಕ ಇರುವ ವೆಂಕಟಪ್ಪ ಆರ್ಟ್ ಗ್ಯಾಲರಿಯೂ ನವೀಕರಣಗೊಳ್ಳುತ್ತಿದೆ.

ಇವತ್ತಿಗೂ ಬೆಂಗಳೂರು ಮಹಾನಗರಪಾಲಿಕೆಯ ಕಟ್ಟಡ, ಕೆಂಪೇಗೌಡ ವಸ್ತುಸಂಗ್ರಹಾಲಯ ಮೊದಲಾದ ಕಚೇರಿಗಳು ಮೇಯೋ ಹಾಲಿನಲ್ಲಿವೆ. ಕರ್ನಾಟಕದ ಉಚ್ಚ ನ್ಯಾಯಾಲಯ ಅದೇ ಅಠಾರಾ ಕಚೇರಿಯಲ್ಲಿಯೇ ಕಾರ್ಯನಿರ್ವಹಿಸುತ್ತಿದೆ. ಸರ್ಕಾರಿ ಕೇಂದ್ರ ಗ್ರಂಥಾಲಯ ಅದೇ ಕಟ್ಟಡಲ್ಲಿದೆ. ಅವರು ರೂಪಿಸಿದ ಕೆಥೆಡ್ರಲ್ ಇವೆ. ಕಬ್ಬನ್ ಪಾರ್ಕ್ ಇನ್ನು ಹೆಚ್ಚೆಚ್ಚು ಚಂದಗೊಂಡು ಜನರನ್ನು ಆಕರ್ಷಿಸುತ್ತಿದೆ. ಸ್ಯಾಂಕಿ ಕೆರೆಯು ಒತ್ತುವರಿಗೊಳಗಾಗಿ ನಿರ್ಲಕ್ಷ್ಯಕ್ಕೊಳಗಾಗಿದ್ದದ್ದು ಈಗ ಕೆಲವು ವರ್ಷಗಳಿಂದ ಉದ್ಯಾನವನವಾಗಿ ಜನರನ್ನು ಸೆಳೆಯುತ್ತಿದೆ.



ಪುರಾತನ ಶಿಲ್ಪ

ಯಾವುದೇ ಊರಿನಂತೆ ಬೆಂಗಳೂರು ಬೆಳೆಯುತ್ತಲೇ ಇದೆ. ತನ್ನ ಸುತ್ತಮುತ್ತಲ ಹಳ್ಳಿ, ಕೇರಿಗಳ ಗುರುತು ಕರಗಿಸಿ ಬೆಂಗಳೂರಾಗಿಸುವ ಪ್ರಕ್ರಿಯೆಯೊಂದಿಗೆ ಅಪಾಯಕಾರಿಯಾಗಿಯೇ ಬೆಳೆಯುತ್ತಿದೆ. ಅಲ್ಲಿ ಇರುವವು, ಇಲ್ಲವಾಗಿರುವವು, ಅಭಿವೃದ್ಧಿಗೊಳ್ಳುತ್ತಿರುವವು ಯಾವುವು ಎಂದು ಗಮನಹರಿಸಿದರೆ ಒಂದು ಸಂಗತಿ ಸ್ಪಷ್ಟವಾಗುತ್ತದೆ: ಕಟ್ಟಡ, ನಿಲ್ದಾಣ, ಆಟದ ಮೈದಾನ, ಮಾಲ್‌ಗಳು ಬೆಳೆಯುತ್ತಿವೆ. ಆದರೆ ಕೆರೆಗಳ ನುಂಗಿ ಬದುಕ ಬಯಸಿದ್ದೇವೆ.

ಹೌದು. ಬೆಳೆಯುವ ಪಟ್ಟಣಕ್ಕೆ ಒಂದಾದ ಮೇಲೊಂದು ಕೆರೆ ಕಟ್ಟಿ ನೀರಿನ ಅಗತ್ಯ ಪೂರೈಸಲು ಅಂದಿನ ಆಳ್ವಿಕರು ಪ್ರಯತ್ನಿಸಿದ್ದರು. ಆದರೆ ಈಗ ಕೆರೆಗಳನ್ನೇ ಮಂಗಮಾಯ ಮಾಡಿದ್ದೇವೆ. ಸರ್ಕಾರಿ ಅಂಕಿಅಂಶಗಳ ಪ್ರಕಾರ 40483 ಕೆರೆಗಳ ರಾಜ್ಯ ಕರ್ನಾಟಕ. ಅದರಲ್ಲಿ 837 ಕೆರೆಗಳು ಬೆಂಗಳೂರಿನ ಆಸುಪಾಸಿವೆ. ಕರ್ನಾಟಕದ 18885 ಕೆರೆಗಳ ಸರ್ವೇ ಆದಾಗ ತಿಳಿದುಬಂದ ವಿಷಯ, ಅದರಲ್ಲಿ 7800 ಕೆರೆಗಳು ಒತ್ತುವರಿಯಾಗಿವೆ ಮತ್ತು ಕೆಲವು ಕೆರೆಗಳೇ ಇಲ್ಲದಾಗಿವೆ! ಬೆಂಗಳೂರು ಒಂದರಲ್ಲೇ 734 ಕೆರೆಗಳು ಒತ್ತುವರಿಯಾಗಿವೆ! ಮಿಲ್ಲರ್ ಕೆರೆ, ಧರ್ಮಾಂಬುಧಿ ಕೆರೆಯಂತಹ ನೂರಾರು ಕೆರೆಗಳು ಹೇಳಹೆಸರಿಲ್ಲವಾಗಿವೆ. ಬೆಂಗಳೂರಿನ ಅತಿ ದೊಡ್ಡ ಕೆರೆಯಾಗಿದ್ದ ಸಂಪಂಗಿ ಕೆರೆ ಕಂಠೀರವ ಸ್ಟೇಡಿಯಂ ಆಗಿ, ಚಂದಕ್ಕಾಗಿ ಒಂದು ಮೂಲೆಯಲ್ಲಿ ಅಂಗೈಯಗಲದ ಕೊಳವಷ್ಟೇ ಆಗಿ ಉಳಿದಿದೆ. ಧರ್ಮಾಂಬುಧಿ ಕೆರೆ ಇಲ್ಲವಾಗಿ ಮೆಜೆಸ್ಟಿಕ್ ಬಸ್ ಸ್ಟ್ಯಾಂಡ್, ಮೆಟ್ರೊ ಸ್ಟೇಷನ್ ಆಗಿದೆ. ಮಿಲ್ಲರ್ ಕೆರೆ ಇಲ್ಲ, ಮಿಲ್ಲರ್ ಕೆರೆಯ ರಸ್ತೆ ಮಾತ್ರ ಹೆಸರಿನಲ್ಲಿ ಉಳಿದಿದೆ.

ಹೊಟ್ಟೆಪಾಡಿಗಾಗಿ, ವಿಶ್ರಾಂತ ಬದುಕಿಗಾಗಿ ಬೆಂಗಳೂರಿಗೆ ಬಂದು ನೆಲೆಸಿರುವವರಿಗೆ ಕೆರೆಗಳ ಇತಿಹಾಸ, ಗುರುತು ತಿಳಿದೇ ಅಲ್ಲ. ಕೆರೆಗಳ ಸುತ್ತಮುತ್ತ ಲೇಕ್ ವ್ಯೂ ಹೋಟೆಲು, ವಸತಿ ಸಮುಚ್ಚಯಗಳನ್ನು ಕಟ್ಟುವವರಿಗೆ ಕೆರೆಯ ಮಹತ್ವ ಏನಿದ್ದರೂ ಚಂದಕ್ಕೆ ಮತ್ತು ರೇಟು ಏರಿಸುವುದಕ್ಕೆ. ಇನ್ನು ಸುರಿದ ಮಳೆ ನೀರನ್ನು ಅಲಕ್ಷಿಸಿ ಚರಂಡಿಗೆ ಹರಿಯಲು ಬಿಟ್ಟು, ಇರುವ ಕೆರೆಗಳ ತುಂಬಿ ಕಟ್ಟಡ ಮೈದಾನಗಳ ಕಟ್ಟಲು ಅನುಮತಿಯಿತ್ತು, ಶರಾವತಿ, ಕಾವೇರಿ, ಹೇಮಾವತಿಯಂತಹ ದೂರದ ನದಿ ಅಣೆಕಟ್ಟೆಗಳಿಂದೆಲ್ಲ ಬೆಂಗಳೂರಿಗೆ ನೀರು ತರುವ ಯೋಜನೆ ಹಾಕುವವರು ನಮ್ಮ ಆಳ್ವಿಕರಾಗಿದ್ದಾರೆ. ಗಂಗಾಮಾತೆಯ ಬಗೆಗೆ ಭಕ್ತಿ, ಕೆರೆನದಿಗಳ ಬಗೆಗೆ ಅಸಡ್ಡೆ, ನಿರಾಸಕ್ತಿ! ಇದೆಂಥ ಸಾಂಸ್ಕೃತಿಕ ಮನೋಭಿತ್ತಿ?

ಅತಿವೇಗದಲ್ಲಿ ಬೆಳೆವ ನಗರಗಳು ಹೃದಯವನ್ನು ಕಳೆದುಕೊಳ್ಳಬಾರದು. ಪ್ರತಿ ಊರಿಗೂ ಒಂದು ಇತಿಹಾಸವಿರುತ್ತದೆ. ಮಾದರಿಗಳೂ ಪಾಠಗಳೂ ಇರುತ್ತವೆ. ಕಾಲಕಾಲಕ್ಕೆ ಅವನ್ನು ಬಗೆದು ಕಣ್ಣಮುಂದೆ ಹರಡಿಕೊಂಡರೆ ಎಡವಿದಲ್ಲೇ ಮತ್ತೆ ಎಡವುವ ಪ್ರಮಾದ ಸಂಭವಿಸದು. ಈ ದೃಷ್ಟಿಯಿಂದ ಬೆಂಗಳೂರೆಂಬ ಊರನ್ನು ಕಟ್ಟಿದವರ, ಕಟ್ಟಿದ ಬಗೆಗಳ ಬಗೆಗೆ ಅವಲೋಕನ ಅಗತ್ಯವಾಗಿದೆ. ಸ್ಯಾಂಕಿಯವರ ವ್ಯಕ್ತಿತ್ವವು ಇತಿಹಾಸದರಿವಿನಲ್ಲಿ ವರ್ತಮಾನವ ಕಂಡು ಭವಿಷ್ಯದ ಮುನ್ನೋಟ ರೂಪಿಸುವಂತಹ ಎಚ್ಚರವನ್ನು ಪ್ರಜೆಗಳಲ್ಲಿಯೂ, ಅವರು ಆಯ್ದು ಕಳಿಸಿದ ಜನಪ್ರತಿನಿಧಿಗಳಲ್ಲಿಯೂ ಮೂಡಿಸಬೇಕಿದೆ.

ಪ್ರತಿಕ್ರಿಯಿಸಿ: feedback@sudha.co.in